Jain College

# ಕನ್ನಡ ಹಬ್ಬ: ಜೈನ್ ಕಾಲೇಜಿನಲ್ಲಿ ಪಸರಿಸಿದ ಸಾಂಸ್ಕೃತಿಕ ಮಲ್ಲಿಗೆಯ ಕಂಪು!

**"ಜೋಗದ ಸಿರಿ ಬೆಳಕಿನಲ್ಲಿ, ತುಂಗೆಯ ತೆನೆ ಬಳುಕಿನಲ್ಲಿ, ಸಹ್ಯಾದ್ರಿಯ ಲೋಹದಲಿರ ಉತ್ತುಂಗದ ನಿಲುಕಿನಲ್ಲಿ – ನಿತ್ಯೋತ್ಸವ ತಾಯೆ ನಿತ್ಯೋತ್ಸವ"** ಎಂದು ಜೈನ್ ಕಾಲೇಜಿನ ವಿದ್ಯಾರ್ಥಿಗಳು ಹಾಡುತ್ತಿದ್ದರೆ, ನೆರೆದಿದ್ದವರಲ್ಲಿ ಕನ್ನಡಾಭಿಮಾನ ಉಕ್ಕಿ ಹರಿಯುತ್ತಿತ್ತು. ಕನ್ನಡ ಭಾಷೆಯ ಪ್ರಸರಣ ಹಾಗೂ ಕನ್ನಡತನವನ್ನು ಜಾಗೃತಗೊಳಿಸುವ ಉದ್ದೇಶದಿಂದ ಅರ್ಥಪೂರ್ಣವಾಗಿ ಹಮ್ಮಿಕೊಳ್ಳಲಾಗಿದ್ದ ' ಕನ್ನಡ ಹಬ್ಬ' ಕಾರ್ಯಕ್ರಮವು ಸಾಂಸ್ಕೃತಿಕ ಹಾಗೂ ಸಾಹಿತಿಕ ಸೇತುವೆಯಾಗಿ ಮೂಡಿಬಂದದ್ದು ವಿಶೇಷ.

**"ಕನ್ನಡವನ್ನು ನೆಂಚಿಕೊಳ್ಳುವ ಬದಲಾಗಿ ಹಂಚಿಕೊಂಡರೆ, ಭಾಷೆ ಉಳಿದು ಬೆಳೆಯುವುದಕ್ಕೆ ದಾರಿ ಮಾಡಿಕೊಡುತ್ತದೆ"** ಎಂದು ಹೇಳುತ್ತಾ ಜೈನ್ ಕಾಲೇಜಿನ ಕನ್ನಡ ಸಾಂಸ್ಕೃತಿಕ ಉತ್ಸವಕ್ಕೆ ತಮ್ಮದೇ ವೈಖರಿಯಲ್ಲಿ ಚಾಲನೆ ನೀಡಿದರು, ಮುಖ್ಯ ಅತಿಥಿಗಳಾಗಿ ಆಗಮಿಸಿದ್ದಂತಹ ಖ್ಯಾತ ಸಾಹಿತಿ ಬಿ. ಆರ್ ಲಕ್ಷ್ಮಣ್‌ರಾವ್‌ರವರು. ತಮ್ಮ 'ಜಾಲಿ ಬಾರಿನಲ್ಲಿ ಕೂತು' ಎಂಬ ತುಂಟ ಕವನದಿಂದ ' ಅಮ್ಮ ನಿನ್ನ ಎದೆಯಾಳದಲ್ಲಿ'ಯಂತಹ ಮನಮುಟ್ಟುವ ಕವನಗುಚ್ಛಗಳ ಮೂಲಕ ಎಲ್ಲರ ಮನೆಮಾತಾಗಿರುವ ಇವರು, ತಮ್ಮ ಹನಿಗವನಗಳ ಮೂಲಕ ನೆರೆದಿದ್ದ ಪ್ರೇಕ್ಷಕರನ್ನು ರಂಜಿಸಿದರಲ್ಲದೆ, **" ಬೇರೆಯ ಉದ್ಯೋಗ ಬಿಟ್ಟು, ಪಣ ತೊಟ್ಟು, ಹಗಲಿರುಳು ಎಡೆಬಿಡದೆ ದುಡಿದದ್ದಕ್ಕೆ, ಸಿಕ್ಕ ಪದಕ ಈ ಕನ್ನಡ"** ವೆಂದು ಹೇಳಿ ತಮ್ಮ ಕನ್ನಡಾಭಿಮಾನವನ್ನು ಮೆರೆದರು. ಬೆಂಗಳೂರಿನಲ್ಲಿ ಇಂದು ಕನ್ನಡಿಗರ ಸಂಖ್ಯೆ ಕಡಿಮೆಯಾಗುತ್ತಿರುವ ಸಂದರ್ಭದಲ್ಲಿ, ತನ್ನ ಶೈಕ್ಷಣಿಕ ಗುಣಮಟ್ಟವನ್ನು ಕಾಯ್ದುಕೊಳ್ಳುವ ಮೂಲಕ, ವಿದ್ಯಾರ್ಥಿಗಳಲ್ಲಿ ನಾಡು – ನುಡಿಯ ಬಗ್ಗೆ ಜಾಗೃತಿ ಮೂಡಿಸುತ್ತಿರುವ ಜೈನ್ ಕಾಲೇಜು, ನಾಳಿನ ಭವಿಷ್ಯಕ್ಕೆ ಹೊಸ ಭರವಸೆಯ ಅಧ್ಯಾಯವನ್ನು ಬರೆದಿದೆ ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

**ವಿದ್ಯಾರ್ಥಿಗಳು ನಡೆಸಿಕೊಟ್ಟ ಜಾನಪದ ನೃತ್ಯ, ಭಾವಗೀತೆ ಮತ್ತು ಇನ್ನಿತರ ಸಾಂಸ್ಕೃತಿಕ ಕಾರ್ಯಕ್ರಮಗಳು ಪ್ರೇಕ್ಷಕರನ್ನು ಮನಸೆಳೆದವು.**

ಕಾರ್ಯಕ್ರಮದಲ್ಲಿ ಡಾ. ಆರ್ ಚೆನ್‌ರಾಜ್ ಜೈನ್, ಅಧ್ಯಕ್ಷರು, ಜೈನ್ ಸಮೂಹ ಸಂಸ್ಥೆ, ಪ್ರೊ. ಕೆ ಎಸ್ ಶಾಂತಮಣಿ, ಮಾರ್ಗದರ್ಶಕರು, ಜೈನ್ ಸಮೂಹ ಸಂಸ್ಥೆ ಹಾಗೂ ಡಾ. ಬಿ ಟಿ ವೆಂಕಟೇಶ್, ನಿರ್ದೇಶಕರು, ಪಿ ಯು ಪ್ರೋಗ್ರಾಮ್ ಮೊದಲಾದವರು ಉಪಸ್ಥಿತರಿದ್ದರು.

## Celebration of Geeta Jayanthi at Jain College, V V Puram

Bhagavad – Geeta is an ancient Sanskrit epic which is considered to be the most significant texts in the history of literature and philosophy. It is said that even the Lord Yama couldn't stand in front of the person who just knew few verses of Bhagavad – Geeta. Undoubtedly **Bhajagovindam strotra by Sri Adi Shankaracharya** spreads light on the importance of Bhagavad – Geeta.

The celebration of **"Geeta Jayanthi"** by Department of Sanskrit threw light on valuable philosophical aspects of Bhagavad – Geeta. The Geeta Jayanthi was symbolically celebrated with Dance, Music, Drama and various cultural activities which reflect our culture.

**Carnatic Music Singer and Sanskritist Dr. T S Sathyavati** graced the occasion as guest of honor.The importance and application of Bhagavad – Geeta in daily life was sermonized by the guest to the students which added value to the programme.